ಕರ್ನಾಟಕ ವಿಧಾನ ಪರಿಷತ್ತು

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	548 (738)
2.	ಸದಸ್ಯರ ಹೆಸರು	:	ಶ್ರೀ ವಿಜಯ್ ಸಿಂಗ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
3.	ಉತ್ತರಿಸಬೇಕಾದ ದಿನಾಂಕ	:	10-03-2020
4.	ಉತ್ತರಿಸುವ ಸಚಿವರು	:	ಮಾನ್ಯ ನಗರಾಭಿವೃದ್ಧಿ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
(ಅ)	ಬೀದರ್ ನಗರದ ನಿರಂತರ ಕುಡಿಯುವ ನೀರು ಪೂರೈಕೆ ಯೋಜನೆ ಪೂರ್ಣಗೊಂಡಿದೆಯೇ?	ಏಷ್ಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮದಡಿಯಲ್ಲಿ (ಎನ್.ಕೆ.ಯು.ಎಸ್.ಐ.ಪಿ) ಬೀದರ್ ನಗರದಲ್ಲಿ 24/7 ಕುಡಿಯುವ ನೀರಿನ ಯೋಜನೆ ದಿನಾಂಕ:30/01/2015 ರಂದು ಮೆ//ವಿಶ್ವರಾಜ್ ಇನ್ಫ್ರಾ.ಲಿ. ರವರಿಗೆ ಗುತ್ತಿಗೆ ನೀಡಿ ಕಾಮಗಾರಿ ಪ್ರಾರಂಭಿಸಲಾಗಿದೆ. ಗುತ್ತಿಗೆ ಕರಾರಿನಂತೆ ಕಾಮಗಾರಿ ಮೊದಲನೆ ಹಂತ (ನಿರ್ಮಾಣ ಕಾರ್ಯ) ಪೂರ್ಣಗೊಂಡಿದ್ದು, ಗುತ್ತಿಗೆದಾರರು ಎರಡನೆ ಹಂತದಲ್ಲಿ (ಪ್ರಾಯೋಗಿಕ) ಕಾರ್ಯಚರಣೆ ಮತ್ತು ನಿರ್ವಹಣೆ ಮಾಡುತ್ತಿರುತ್ತಾರೆ.
(ಆ)	ಬೀದರ ನಗರದ ಎಷ್ಟು ಮನೆಗಳಿಗೆ ಕುಡಿಯುವ ನೀರಿನ ಸಂಪರ್ಕ ಒದಗಿಸಲಾಗಿದೆ.	ಬೀದರ್ ನಗರದಲ್ಲಿ ಸದರಿ ಗುತ್ತಿಗೆಯಲ್ಲಿ 33195 ಸಂಖ್ಯೆ ಮನೆ ಸಂಪರ್ಕ ಅಳವಡಿಸಲು ಅವಕಾಶವಿದೆ. ಇಲ್ಲಿಯವರೆಗೆ 27000 ಸಂಖ್ಯೆ ಮನೆ ಸಂಪರ್ಕ ನೀಡಲಾಗಿದೆ ಮತ್ತು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಬಾಕಿ ಉಳಿದ 5 ವಲಯಗಳಲ್ಲಿ (ವಲಯ 1,2,3,7 ಮತ್ತು 8) 78 ಕಿ.ಮೀ ಉದ್ದದ ವಿತರಣಾ ಜಾಲ ಅಳವಡಿಸುವ ಕಾಮಗಾರಿಯನ್ನು ಸದರಿ ವಲಯಗಳಲ್ಲಿ 1700 ಸಂಖ್ಯೆ ಮನೆಗಳಿಗೆ ಕುಡಿಯುವ ನೀರಿನ ಸಂಪರ್ಕಗಳನ್ನು ಒದಗಿಸಲಾಗಿರುತ್ತದೆ.
(ಇ)	ಬೀದರ್ ನಗರದ ಯಾವ ಯಾವ ಭಾಗಗಳಿಗೆ ನಿರಂತರ ಕುಡಿಯುವ ನೀರು ಪೂರೈಕೆ ಯೋಜನೆಯಿಂದ ನೀರು ಪೂರೈಕೆ ಆಗುತ್ತಿಲ್ಲ; ಆಗದಿರಲು ಕಾರಣಗಳೇನು?	ಬೀದರ್ ನಗರದ ಶೇ.15 ಭಾಗದಲ್ಲಿ 24/7 ನೀರು ಪೂರೈಕೆಯಾಗುತ್ತಿದ್ದು, ಉಳಿದ ಭಾಗದಲ್ಲಿ Intermittent ಸರಬರಾಜು ಆಗುತ್ತಿದೆ. ಹೊಸ ನೀರು ಸರಬರಾಜು ಯೋಜನೆ ವಿಸ್ತೃತ ವರದಿ ಮಾಡುವ ಸಂದರ್ಭದಲ್ಲಿ ಬೀದರ್ ನಗರಕ್ಕೆ ಮಾಂಜ್ರ ಜಲಾಶಯದಿಂದ ಕುಡಿಯುವ ನೀರು ಸರಬರಾಜು 16 ಎಂಎಲ್‌ಡಿ ಪೂರೈಸಲಾಗುತ್ತಿತ್ತು. ಅದನ್ನು ಗಮನಿಸುತ್ತ ಉಳಿಕೆ ಬೇಡಿಕೆಗೆ ಕಾರಂಜ ನದಿ ಜಲಾಶಯ ಮೂಲದಿಂದ ಯೋಜನಾ ವರದಿ ತಯಾರಿಸಿ, ಕಾಮಗಾರಿ ಸಂಪೂರ್ಣ-

ಕ್ರ. ಸಂ	ಪ್ರಶ್ನೆ	ಉತ್ತರ
		ಗೊಳಸಲಾಯಿತು. ಆದರೆ, ಮಾಂಜ್ರ ನದಿ ಮೂಲದಲ್ಲಿ ಬೇಸಿಗೆಯಲ್ಲಿ ನೀರು ಲಭ್ಯವಿಲ್ಲದ ಕಾರಣ ನಗರಸಭೆಯವರು 2017 ರ ನಂತರ ಸಂಪೂರ್ಣವಾಗಿ ಇದನ್ನು ಸ್ಥಗಿತಗೊಳಸಿರುತ್ತಾರೆ. ಈ ಕಾರಣದಿಂದ ಬೀದರ್ ನಗರಕ್ಕೆ ಕುಡಿಯುವ ನೀರು ಕೊರತೆಯಾಗಿರುತ್ತದೆ. ಈ ಕೊರತೆಯನ್ನು ಕಾರಂಜಾ ಮೂಲದಿಂದಲೇ ಸರಬರಾಜು ಮಾಡಲು ಪರಿಶೀಲಿಸಲಾಗುತ್ತಿದೆ. ತದನಂತರ ಮೇಲಿನ ಪ್ರದೇಶಗಳಗೆ ನಿರಂತರ ನೀರು ಸರಬರಾಜು ಮಾಡಲು ಸಾಧ್ಯವಾಗುವುದು. ನಗರದಲ್ಲಿ ನಿರಂತರ ಕುಡಿಯುವ ನೀರು ಪೂರೈಕೆ ಆಗದ ಭಾಗಗಳು ಈ ಕೆಳಗಿನಂತಿವೆ: • ಸಂಗಮೇಶ್ವರ ಕಾಲೋನಿ • ಚಿದ್ರಿ ಬಡಾವಣೆಯ ಹಳೆಯ ಗ್ರಾಮ • ಗೋಲೇಖಾನಾ • ಕುಂಬಾರವಾಡ • ಅಗ್ರಿಕಲ್ಚರ್ ಕಾಲೋನಿ • ಹೊಸ ಆದರ್ಶ ಕಾಲೋನಿ • ಲೇಬರ ಕಾಲೋನಿ • ಪಕ್ಕಲವಾಡಾ ಮೇಲ್ಕಂಡ ಬಡಾವಣೆಗಳಲ್ಲಿ ಪಂಚಾಯತ್‌ರಾಜ್, ಕೆ.ಆರ್.ಐ.ಡಿ.ಎಲ್ ಹಾಗೂ ನಗರಸಭೆ ವತಿಯಿಂದ ರಸ್ತೆ ಮತ್ತು ಮಳೆನೀರು ಚರಂಡಿ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಅಳವಡಿಸಿದ ಪೈಪ್‌ಲೈನ್ ಮತ್ತು ನಳ ಸಂಪರ್ಕಗಳು ತಾತ್ಕಾಲಿಕವಾಗಿ ಸ್ಥಗಿತಗೊಂಡಿರುವುದರಿಂದ ನಿರಂತರ ನೀರು ಪೂರೈಕೆ ಆಗುತ್ತಿಲ್ಲ. ಈ ಸ್ಥಳಗಳಲ್ಲಿ ಪ್ರಸ್ತುತ ಸ್ಥಳೀಯ ಬೋರ್‌ವೆಲ್‌ಗಳ ಮುಖಾಂತರ ನೀರು ಪೂರೈಸಲಾಗುತ್ತಿದೆ. ಸದರಿ ಬಡಾವಣೆಗಳಲ್ಲಿ ರಸ್ತೆ ಮತ್ತು ಮಳೆನೀರು ಚರಂಡಿ ಕಾಮಗಾರಿಗಳನ್ನು ಶೀಘ್ರದಲ್ಲಿ ಪೂರ್ಣಗೊಳಸಿ ನೀರು ಸರಬರಾಜು ಚಾಲನೆಗೊಳಸಲಾಗುವುದು.

ಕಡತ ಸಂಖ್ಯೆ: ನಅಇ 57 ಪಿ.ಆರ್.ಜೆ 2020

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು.